ಮಾನ್ಯ ಪ್ರಕಾಶ್ ಹುಕ್ಕೇರಿಯವರು ಅದನ್ನು ಹೆಚ್ಚಿಗೆ ಮಾಡಬೇಕೆಂದು ಕೇಳುತ್ತಿದ್ದಾರೆ. ಅದನ್ನು ಮುಂದಿನ ಬಜೆಟ್‌ನಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಅದೇ ರೀತಿ ಬಿ.ಸಿ.ಎಂ. ಇಲಾಖೆಯಿರ ಬಹುದು ಅಥವಾ ಎಸ್.ಸಿ./ಎಸ್.ಟಿ. ಇಲಾಖೆಯಿರಬಹುದು ನಾವು ಜನಸಂಖ್ಯೆ ಆಧಾರದ ಮೇಲೆ ನಿಗದಿ ಮಾಡುತ್ತಿರುವುದರಿಂದ ಬಿ.ಸಿ.ಎಂ. ಇಲಾಖೆಯಲ್ಲಿ ಮುಂದಿನ ದಿನಗಳಲ್ಲಿ ನೀವು ಹೇಳಿದ ಹಾಗೆ ಬಜೆಟ್‌ಅನ್ನು ಹೆಚ್ಚಿಗೆ ಮಾಡಿಕೊಂಡು 20–25 ಬೋರ್‌ವೆಲ್‌ಗಳನ್ನು ಕೊಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇವೆ.

ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದು

53 (431) ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ. (ಶ್ರೀರಂಗಪಟ್ಟಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀರಂಗಪಟ್ಟಣದ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆಯೆ; ಕಾಮಗಾರಿ ಪ್ರಾರಂಭಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರಕಾರ ಕೈಗೊಂಡಿರುವ ಕ್ರಮವೇನು;

ಆ) ಸದರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಒದಗಿಸಿರುವ ಅನುದಾನ ಎಷ್ಟು;

ಇ) ಪ್ರಸಕ್ತ ಸಾಲಿನಲ್ಲಿಯೇ ಕಾಮಗಾರಿಯನ್ನು ಪ್ರಾರಂಭಗೊಳಿಸಲು ಸರಕಾರ ಕೈಗೊಂಡಿರುವ ಕ್ರಮವೇನು;

ಈ) ಆಸ್ಪತ್ರೆಗೆ ಸಿಬ್ಬಂದಿ/ವೈದ್ಯರನ್ನು ನೇಮಿಸಲು ಸರಕಾರ ಯಾವ ಕ್ರಮ ಕೈಗೊಂಡಿದೆ;

ಉ) ಸಾರ್ವಜನಿಕ ಹಿತದೃಷ್ಟಿಯಿಂದ ಮಂಜೂರಾಗಿರುವ ಯೋಜನೆಗಳನ್ನು ಅನುಷ್ಠಾನಗೊಳಿಸಲು ಈ ರೀತಿ ವಿಳಂಬವಾಗಿರುವ ಬಗ್ಗೆ ಸರಕಾರದ ನಿಲುವೇನು;

ಊ) ಮಂಡ್ಯ–ಮೈಸೂರು ರಸ್ತೆಯಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿದ್ದು 'ತುರ್ತು ಸೇವೆ'ಗೆ ವೈದ್ಯರುಗಳ ಕೊರತೆಯಿದ್ದು ವೈದ್ಯರನ್ನು ನೇಮಕ ಮಾಡುವ ಬಗ್ಗೆ ಸರ್ಕಾರ ಕೈಗೊಳ್ಳುತ್ತಿರುವ ಕ್ರಮವೇನು;

ಋ) ಸ್ತ್ರೀರೋಗ ತಜ್ಞರಿಲ್ಲದೇ ಗರ್ಭಿಣಿ ಮಹಿಳೆಯರ ಚಿಕಿತ್ಸೆಗೆ ಅನಾನುಕೂಲವಾಗುತ್ತಿದ್ದು ಸ್ತ್ರೀರೋಗ ತಜ್ಞರನ್ನು ನೇಮಿಸಲು ಸರಕಾರ ಕ್ರಮ ಕೈಗೊಳ್ಳುತ್ತಿದೆಯೇ; ಹಾಗಿದ್ದಲ್ಲಿ ವಿವರ ನೀಡಿ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಶ್ರೀರಂಗಪಟ್ಟಣದ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯನ್ನು ದಿನಾಂಕ: 25-1-2007 ರ ಆದೇಶದಲ್ಲಿ 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಕಟ್ಟಡ ಕಾಮಗಾರಿ ತೆಗೆದುಕೊಂಡಿರುವುದಿಲ್ಲ.

2005 ರಿಂದ 2007ರ ಅವಧಿಯಲ್ಲಿ ಒಟ್ಟು 146 ತಾಲ್ಲೂಕು ಆಸ್ಪತ್ರೆಗಳನ್ನು 100 ಹಾಸಿಗೆಗಳ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಲಾಯಿತು. ಆ ಪೈಕಿ 116 ಆಸ್ಪತ್ರೆಗಳಿಗೆ ಕಟ್ಟಡಗಳು ಇರಲಿಲ್ಲ. ಅವುಗಳಲ್ಲಿ 73 ಕಟ್ಟಡಗಳನ್ನು ಹಣಕಾಸು ಲಭ್ಯತೆ ಆಧಾರದ ಮೇಲೆ ಹಂತ-ಹಂತವಾಗಿ ತೆಗೆದುಕೊಳ್ಳಲಾಗಿದೆ. ಇನ್ನೂ 43 ಕಟ್ಟಡ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದೆ. ಅದರಲ್ಲಿ ಶ್ರೀರಂಗಪಟ್ಟಣ ಸಾರ್ವಜನಿಕ ಆಸ್ಪತ್ರೆಯು ಸೇರಿದೆ. ಪ್ರಸ್ತುತ ಸರ್ಕಾರದ ಆದ್ಯತೆಯ ಪ್ರಕಾರ ಚಾಲ್ತಿಯಲ್ಲಿರುವ ಯೋಜನೆಗಳನ್ನು ಪೂರೈಸಬೇಕಾಗಿದೆ.

ಆ) ಅನುದಾನ ಒದಗಿಸಿರುವುದಿಲ್ಲ.

ಇ) ಪ್ರಸಕ್ತ ಸಾಲಿನಲ್ಲಿ ಈ ಕಾಮಗಾರಿಯನ್ನು ತೆಗೆದುಕೊಳ್ಳುವ ಪ್ರಸ್ತಾವನೆ ಇರುವುದಿಲ್ಲ.

ಈ) ಮೇಲ್ದರ್ಜೆಗೇರಿಸಿದುದ್ದಕ್ಕೆ ಅನುಗುಣವಾಗಿ ಆಸ್ಪತ್ರೆ ಕಟ್ಟಡ ಕಾಮಗಾರಿಯು ಶೇಡಕ 60 ರಷ್ಟು ಪೂರ್ಣಗೊಂಡ ನಂತರ, ಹೆಚ್ಚುವರಿ ವೈದ್ಯರು ಮತ್ತು ಸಿಬ್ಬಂದಿ ನೇಮಿಸಲು ಸದರಿ ಆಸ್ಪತ್ರೆ ಅರ್ಹತೆ ಪಡೆಯುತ್ತದೆ.

ಉ) ಒಂದು ತಾಲ್ಲೂಕು ಆಸ್ಪತ್ರೆಯ ಕಟ್ಟಡ ಕಾಮಗಾರಿಯನ್ನು ಕೈಗೊಳ್ಳಲು ಸುಮಾರು ರೂ.2.50 ಕೋಟಿಗಳ ಅವಶ್ಯಕತೆ ಇದೆ. ಇದಲ್ಲದೆ, ಔಷಧಿಗಳ ಅನುದಾನವಾಗಿ ಸುಮಾರು ರೂ.10 ಲಕ್ಷಗಳು ಹಾಗೂ ಹೆಚ್ಚುವರಿ ಸಿಬ್ಬಂದಿಗಾಗಿ ಸುಮಾರು ರೂ.36 ಲಕ್ಷಗಳ ವಾರ್ಷಿಕ ಅನುದಾನ ಬೇಕಾಗುತ್ತದೆ. ಔಷಧಿ ಮತ್ತು ಸಿಬ್ಬಂದಿಯನ್ನು ಕಟ್ಟಡ ಕಾಮಗಾರಿಯು ಶೇಕಡ 60 ರಷ್ಟು ಪೂರ್ಣಗೊಂಡ ನಂತರ ಒದಗಿಸಬೇಕಾಗುತ್ತದೆ. ಪ್ರಸ್ತುತ ಸರ್ಕಾರದ ಆದ್ಯತೆಯ ಪ್ರಕಾರ ಚಾಲ್ತಿಯಲ್ಲಿರುವ ಯೋಜನೆಗಳನ್ನು

ಪೂರೈಸಬೇಕಾಗಿದೆ. ಹಣಕಾಸು ಲಭ್ಯತೆ ಆಧಾರದ ಮೇಲೆ ಹಂತ–ಹಂತವಾಗಿ ಕಟ್ಟಡ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾಗಿರುವುದು ಅನಿವಾರ್ಯವಾಗಿದೆ.

ಊ) ಶ್ರೀರಂಗಪಟ್ಟಣದ ಸಾರ್ವಜನಿಕ ಆಸ್ಪತ್ರೆಯು ಪ್ರಸ್ತುತ 30 ಹಾಸಿಗೆಗಳ ಸಾಮರ್ಥ್ಯವನ್ನು ಹೊಂದಿದೆ. ಇಲ್ಲಿಗೆ 7 ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, 4 ವೈದ್ಯರು ಅಂದರೆ ಮಕ್ಕಳ ತಜ್ಞರು, ಮೂಳೆ ತಜ್ಞರು, ಇ.ಎಸ್.ಟಿ. ಮತ್ತು ಹಿರಿಯ ವೈದ್ಯಾಧಿಕಾರಿ ಕಾರ್ಯನಿರ್ವಹಿಸುತ್ತಿದ್ದಾರೆ. ಜನರಲ್ ಮೆಡಿಸನ್, ಜನರಲ್ ಸರ್ಜರಿ ಮತ್ತು ಸ್ತ್ರೀರೋಗ ತಜ್ಞತೆಯಲ್ಲಿ ತಲಾ ಒಂದು ಹುದ್ದೆ ಖಾಲಿ ಇದೆ.

ಋ) ವೈದ್ಯರ/ತಜ್ಞ ವೈದ್ಯರ ಕೊರತೆಯನ್ನು ನೀಗಿಸಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:

1. ಇಲಾಖೆಯಲ್ಲಿ ಖಾಲಿ ಇರುವ 562 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಮುಗಿದ ನಂತರ, ಖಾಲಿ ಹುದ್ದೆಗಳನ್ನು ಆದ್ಯತಾನುಸಾರ ಭರ್ತಿ ಮಾಡಲಾಗುವುದು.
2. 2010 ರಲ್ಲಿ ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವ ವೈದ್ಯರಿಗೆ ಸ್ಥಳ ನಿಯುಕ್ತ ಮಾಡುವ ಮೂಲಕ ತಜ್ಞ ವೈದ್ಯರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆದ್ಯತಾನುಸಾರ ಕ್ರಮ ತೆಗೆದು ಕೊಳ್ಳಲಾಗುವುದು.
3. (1) ಮಕ್ಕಳ ತಜ್ಞರು, (2) ಅರವಳಿಕೆ ತಜ್ಞರು ಹಾಗೂ (3) ಸ್ತ್ರೀರೋಗ ತಜ್ಞರುಗಳ ಕೊರತೆಯನ್ನು ನೀಗಿಸಲು ಮಾಸಿಕ ಗರಿಷ್ಟ ರೂ.50.000 ರವರೆಗೆ ಗೌರವ ಧನ ನೀಡಿ ನೇಮಕ ಮಾಡಿಕೊಳ್ಳಲು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ (ಎನ್.ಆರ್.ಹೆಚ್.ಎಂ.) ಅಡಿ ಅವಕಾಶ ಕಲ್ಪಿಸಲಾಗಿದೆ. ಹಾಗೂ ಇದೇ ಯೋಜನೆಯಡಿ ಪ್ರಕರಣವಾರು ಆಧಾರದ ಮೇಲೆ ಪ್ರತೀ ಪ್ರಕರಣವೊಂದಕ್ಕೆ (1) ಮಕ್ಕಳ ತಜ್ಞರಿಗೆ ರೂ.500, (2) ಅರೆವಳಿಕೆ ತಜ್ಞರಿಗೆ ರೂ.1.000 ಹಾಗೂ (3) ಸ್ತ್ರೀರೋಗ ತಜ್ಞರಿಗೆ ರೂ.1.500 ರಂತೆ ನೀಡಲು ಸಹ ಅವಕಾಶ ಕಲ್ಪಿಸಲಾಗಿದೆ.

4. ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣಾ ಯೋಜನೆ (ಕೆ.ಹೆಚ್.ಎಸ್.ಡಿ.ಆರ್.ಪಿ) ರ ಅಡಿಯಲ್ಲಿ ಮೇಲಿನ ಕ್ರಮ ಸಂಖ್ಯೆ:3 ರಲ್ಲಿ ತಿಳಿಸಿರುವ 3 ತಜ್ಞತೆಗಳನ್ನು ಹೊರತು ಪಡಿಸಿ ಉಳಿದ ತಜ್ಞತೆಯಲ್ಲಿ ಮಾಸಿಕ ರೂ.5.000 ಗೌರವ ಧನ ನೀಡಿ ರಿಟ್ಯೈನರ್‌ಶಿಪ್ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇದೇ ಕೆ.ಹೆಚ್.ಎಸ್.ಆರ್.ಡಿ.ಪಿ. ಯೋಜನೆಯಡಿ, ಸದರಿ ತಜ್ಞರು ಹೊರರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ರೂ.1.000 ದಂತೆ ಗೌರವ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಆದರೆ ವಾರಕ್ಕೆ ಎರಡು ದಿನಕ್ಕೆ ಮಾತ್ರ ಅಂತಹ ಸೇವೆಯನ್ನು ಪಡೆಯಲು ಮಿತಿಗೊಳಿಸಲಾಗಿದೆ.

5. ಎಂ.ಬಿ.ಬಿ.ಎಸ್. ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆಗೆ ತರಬೇತಿ ನೀಡಲಾಗುತ್ತಿದ್ದು, ಈ ಮೂಲಕ ಸ್ತ್ರೀರೋಗ ಹಾಗೂ ಅರವಳಿಕೆ ತಜ್ಞರು ಕೊರತೆಯನ್ನು ನೀಗಿಸಲಾಗುತ್ತಿದೆ.

ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ.ಬಿ. : ನಾನು ಪ್ರಶ್ನೆಯನ್ನು ಕೇಳಿರುವ ಪ್ರಕಾರ ಶ್ರೀರಂಗಪಟ್ಟಣ ಒಂದು ಐತಿಹಾಸಿಕ ಪ್ರವಾಸೋದ್ಯಮ ಸ್ಥಳ ಹಾಗೂ ಅಂತರರಾಷ್ಟ್ರೀಯ ಪ್ರಚಾರವನ್ನು ಹೊಂದಿರತಕ್ಕಂತಹ ಸ್ಥಳ. ಶ್ರೀರಂಗಪಟ್ಟಣದ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಸುಮಾರು ಮೂರು ವರ್ಷಗಳಾಯಿತು. ಕೊನೆಯ ಪಕ್ಷ ಈ ಸರ್ಕಾರ ಈ ವರ್ಷವಾದರೂ ಅದರ ಕೆಲಸವನ್ನು ಕೈಗೆತ್ತಿಕೊಳ್ಳುತ್ತದೆ ಎಂದು ತಿಳಿದು ಕೊಂಡಿದ್ದೆ. ಆದರೆ, ಈ ವರ್ಷ ಕಾಮಗಾರಿಯನ್ನು ತೆಗೆದುಕೊಳ್ಳುವ ಪ್ರಸ್ತಾವನೆ ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ. ದಯಮಾಡಿ ತಮ್ಮ ಮುಖಾಂತರ ಒತ್ತಾಯ ಮಾಡುವುದು ಏನೆಂದರೆ ಶ್ರೀರಂಗಪಟ್ಟಣ ಮುಖ್ಯರಸ್ತೆಯಲ್ಲಿದ್ದು, ಅಲ್ಲಿ ಹೇಳುವುದಕ್ಕೆ ಆಗುವುದಿಲ್ಲದಿರುವಷ್ಟು ವಿಪರೀತವಾದ ಅಪಘಾತಗಳು ಆಗುತ್ತಿವೆ, ಅಲ್ಲಿನ ಪರಿಸ್ಥಿತಿಯನ್ನು ಹೇಳುವುದಕ್ಕೆ ಆಗುವುದಿಲ್ಲ. ದಯವಿಟ್ಟು ಈ ವರ್ಷವಾದರೂ ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಅನುದಾನವನ್ನು ಬಿಡುಗಡೆ ಮಾಡಬೇಕು. ಅದರ ಜೊತೆಗೆ NRHM scheme ಬಂದ ಮೇಲೆ ಔಷಧಿಗೆ ಏನೂ ತೊಂದರೆಯಾಗುತ್ತಿಲ್ಲ. ಆದರೆ, ವೈದ್ಯರ ಕೊರತೆ

ವಿಪರೀತವಾಗಿದೆ. ಮಾನ್ಯ ಸಚಿವರು ನಾಲ್ಕು ವೈದ್ಯಾಧಿಕಾರಿಗಳು ಇದ್ದಾರೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ಅಲ್ಲಿ ಮೂರು ವೈದ್ಯಾಧಿಕಾರಿಗಳು ಮಾತ್ರ ಇದ್ದಾರೆ. ಅದರಲ್ಲಿ medicine ಗೆ ಸಂಬಂಧಪಟ್ಟಂತೆ ವೈದ್ಯಾಧಿಕಾರಿಗಳಿಲ್ಲ. ಒಬ್ಬರು ಮೂಳೆ ತಜ್ಞರು, ಒಬ್ಬರು ಇ.ಎನ್.ಟಿ. ಡಾಕ್ಟರ್ ಹಾಗೂ ಒಬ್ಬರು ಮಕ್ಕಳ ತಜ್ಞರಿದ್ದಾರೆ. ಶ್ರೀರಂಗಪಟ್ಟಣದಲ್ಲಿ ಸುಮಾರು 250–300–400 ರೋಗಿಗಳು ಪ್ರತಿ ದಿನ ಬಂದು ಹೋಗುತ್ತಾರೆ. ಆದರೆ, medicine ವೈದ್ಯಾಧಿಕಾರಿಗಳಿಲ್ಲದೆ ಆ ರೋಗಿಗಳಿಗೆ ಬಹಳ ತೊಂದರೆಯಾಗಿದೆ. ಈ ರೀತಿ ಚಿಕಿತ್ಸೆಗೆ ಬರುವ ರೋಗಿಗಳನ್ನು ಮೈಸೂರಿಗೆ ಕಳುಹಿಸಬೇಕಾದಂತಹ ಸಂದರ್ಭ ಇದೆ.

ಪ್ರತಿ ಹಂತದಲ್ಲಿಯೂ ಏನಾದರೂ ಸಮಸ್ಯೆಗಳು ಬಂದಾಗ, ನೇರವಾಗಿ ಪ್ರಶ್ನೆಯನ್ನು ಮಾಡತಕ್ಕಂಥ ಮುಂದುವರೆದ ಜನ ಅಲ್ಲಿದ್ದಾರೆ ಎನ್ನುವುದನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಾ, ಶ್ರೀರಂಗಪಟ್ಟಣ ಮುಖ್ಯ ರಸ್ತೆಯಲ್ಲಿದ್ದು ಅಲ್ಲಿನ ಆಸ್ಪತ್ರೆಯಲ್ಲಿ ಸ್ತ್ರೀರೋಗ ತಜ್ಞರು ಇಲ್ಲವೆಂದರೆ, ಪರಿಸ್ಥಿತಿಯನ್ನು ನಾವು ಹೇಳಲಿಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ : ಇನ್ನು ಯಾವ ಮಟ್ಟದಲ್ಲಿ ನಾವು ವೈದ್ಯಾಧಿಕಾರಿಗಳನ್ನು ಒದಗಿಸಿಕೊಡಲಾಗುತ್ತದೆ ಎನ್ನುವುದು ಒಂದು ಯೋಚನೆ.

ಅಧ್ಯಕ್ಷರು : ಆಯಿತು, ನೀವು ಪ್ರಶ್ನೆಯನ್ನು ಕೇಳಿ.

ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ : ಒಂದೇ ನಿಮಿಷ ಸಾರ್, ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಏನು ಕೇಳುತ್ತಿದ್ದೀರಿ? ಅವರು ಕೊಟ್ಟ ಉತ್ತರದಲ್ಲಿ ಉಪ ಪ್ರಶ್ನೆ ಮುಖಾಂತರ ಏನಾದರೂ clarification ಇದ್ದರೆ ಕೇಳಿ. ನೀವು ಎಲ್ಲವನ್ನೂ ಹೇಳುತ್ತಾ ಹೋದರೆ ಹೇಗೆ?

ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ : ಇಲ್ಲ ಸಾರ್, ಪ್ರಶ್ನೆಗೆ ಸಂಬಂಧಿಪಟ್ಟಂತೆ ಕೇಳುತ್ತಿದ್ದೇನೆ. ಅರಕೆರೆ ಮತ್ತು ಮಹದೇವಪುರದಲ್ಲಿ PHC ಗಳಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಇದ್ದರು. ಅವರನ್ನು ವರ್ಗಾವಣೆ ಮಾಡಿದ್ದಾರೆ. ಮಹಿಳಾ ವೈದ್ಯಾಧಿಕಾರಿಗಳು ಇವರು ಕಡೆಗೆ ವರ್ಗಾವಣೆ ಮಾಡುತ್ತೀರಿ. ನಾವು ಯಾವ ರೀತಿ ಜನರ ಜೊತೆಯಲ್ಲಿ ಸ್ಪಂದನೆ

ಮಾಡಬೇಕು, ಉತ್ತರವನ್ನು ಹೇಳಬೇಕು ಎನ್ನುವುದು ಗೊತ್ತಾಗುತ್ತಿಲ್ಲ. ದಯಮಾಡಿ ತಮ್ಮ ಮುಖಾಂತರ ಸರ್ಕಾರದ ಸ್ಪಷ್ಟ ಉತ್ತರವನ್ನು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, 2005 ಮತ್ತು 2007ನೇ ಅವಧಿಯಲ್ಲಿ ಎಲ್ಲಾ ತಾಲ್ಲೂಕು ಮಟ್ಟದ 146 ಆಸ್ಪತ್ರೆಗಳನ್ನು 100 ಹಾಸಿಗೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಒಂದು ಸಮುದಾಯ ಆರೋಗ್ಯ ಕೇಂದ್ರವನ್ನು ಪ್ರಾರಂಭ ಮಾಡಬೇಕಾದರೆ ಸುಮಾರು ಎರಡು ಕೋಟಿ ಐವತ್ತು ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಇವತ್ತು ಸುಮಾರು 146 ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಪೈಕಿ 30 ಆಸ್ಪತ್ರೆಗಳಿಗೆ ಕಟ್ಟಡಗಳು ಲಭ್ಯವಿರುವುದಿಲ್ಲ. 116 ಆಸ್ಪತ್ರೆಗಳಿಗೆ ಕಟ್ಟಡಗಳು ಲಭ್ಯವಿರುತ್ತದೆ. ಈ ಪೈಕಿ 73 ಕಟ್ಟಡಗಳ ಕಾಮಗಾರಿ ಪ್ರಾರಂಭದಲ್ಲಿದೆ. ಸುಮಾರು 88 ಕೋಟಿ ರೂಪಾಯಿ ವೆಚ್ಚದಲ್ಲಿ ಕೆಲಸಗಳು ನಡೆಯುತ್ತಿದೆ. ಶ್ರೀರಂಗಪಟ್ಟಣ ಸಾರ್ವಜನಿಕ ಆಸ್ಪತ್ರೆಯ ಬಗ್ಗೆ ತಾವೇನು ಪ್ರಸ್ತಾವನೆಯನ್ನು ಸಲ್ಲಿಸಿದ್ದೀರಿ, ಮುಂದಿನ ದಿನಗಳಲ್ಲಿ 43 ಆಸ್ಪತ್ರೆಗಳಲ್ಲಿ ಇದು ಕೂಡ ಒಂದಾಗಿದೆ. ತಕ್ಷಣವೇ ಹಣದ ಲಭ್ಯತೆಯ ಆಧಾರದ ಮೇಲೆ ಯಾವ ಯಾವ ರೀತಿಯಲ್ಲಿ ಹಂತ ಹಂತವಾಗಿ ತೆಗೆದುಕೊಳ್ಳಬೇಕು ಆ ರೀತಿಯಲ್ಲಿ ತೆಗೆದುಕೊಳ್ಳುತ್ತೇವೆ.

ತಾವು ವೈದ್ಯರ ಬಗ್ಗೆ ವಿಷಯ ಪ್ರಸ್ತಾಪಿಸಿದ್ದೀರಿ, ಮಕ್ಕಳ ತಜ್ಞರಾಗಿರಬಹುದು, ಅರವಳಿಕೆ ತಜ್ಞರಾಗಿರಬಹುದು, ಸ್ತ್ರೀರೋಗ ತಜ್ಞರಾಗಿರಬಹುದು, ಅವರಿಗೆ 50 ಸಾವಿರ ರೂಪಾಯಿಗಳ ಗೌರವಧನವನ್ನು ಕೊಡುವುದಕ್ಕೆ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಯಾರಾದರೂ ಸ್ಪೆಷಲಿಸ್ಟ್‌ಗಳು ಬರುವವರಿದ್ದರೆ ಅವರನ್ನು ನೀವು ತೆಗೆದುಕೊಳ್ಳಬಹುದು. ನಂತರ ಬೇರೆ ಬೇರೆ ಎಂ.ಬಿ.ಬಿ.ಎಸ್. ವೈದ್ಯರು ಆಗಿರಬಹುದು, Para-medical staff ಆಗಿರಬಹುದು, ಅವರ ಆಯ್ಕೆಗಾಗಿ ಕೆ.ಪಿ.ಎಸ್.ಸಿ. ಅವರಿಗೆ ಪ್ರಸ್ತಾವನೆಯನ್ನು ಕಳುಹಿಸಿಕೊಡಲಾಗಿದೆ. ಕೆ.ಪಿ.ಎಸ್.ಸಿ. ಯಿಂದ ಬಂದ ನಂತರ ಆದಷ್ಟು ಬೇಗ ಅವರನ್ನು ಹಂತ ಹಂತವಾಗಿ ನಾವು ಯಾವ ರೀತಿ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳುತ್ತೇವೆ.

ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ : ಮಾನ್ಯ ಅಧ್ಯಕ್ಷರೆ, ದಯಮಾಡಿ ಈ ವರ್ಷ ಕಟ್ಟಡವನ್ನು ಪ್ರಾರಂಭ ಮಾಡಲಿಕ್ಕೆ ನಿಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಮಾನ್ಯ ಸಚಿವರಿಂದ ಸ್ಪಷ್ಟವಾದ ಭರವಸೆಯನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಶ್ರೀರಾಮುಲು : ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇವೆ. 43ರಲ್ಲಿ ಇದೂ ಒಂದಾಗಿದೆ. ಆರ್ಥಿಕ ಇಲಾಖೆ ಆದಷ್ಟು ಬೇಗನೆ ಯಾವ ರೀತಿ ಹಣವನ್ನು ಒದಗಿಸಿಕೊಡುತ್ತದೆಯೋ ಆ ರೀತಿಯಲ್ಲಿ ನಿಮಗೆ ವ್ಯವಸ್ಥೆಯನ್ನು ಆದಷ್ಟು ಬೇಗನೆ ಮಾಡಿಕೊಡುತ್ತೇನೆ.

ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ : ಮಹದೇವಪುರ ಮತ್ತು ಅರಕೆರೆ ಸಮುದಾಯ ಆರೋಗ್ಯ ಕೇಂದ್ರದ ಎರಡೂ ಕಡೆಗಳಲ್ಲಿ ಮಹಿಳಾ ವೈದ್ಯಾಧಿಕಾರಿಗಳನ್ನು ವರ್ಗಾವಣೆ ಮಾಡಿದ್ದೀರಿ. ಅಲ್ಲಿ ಈಗ ವೈದ್ಯರೇ ಇಲ್ಲ. ಯಾರೋ ಒಬ್ಬರು ವೈದ್ಯರು ಇರುತ್ತಾರೆ; ಕಡಿಮೆ ಸಮಯದ ಅವಧಿಯಲ್ಲಿ ಬಂದು ಹೋಗುತ್ತಾರೆ. ಹತ್ತು ಸಾವಿರಕ್ಕಿಂತ ಹೆಚ್ಚು ಜನ ಅಲ್ಲಿ ವಾಸ ಮಾಡುತ್ತಾರೆ. ಅಲ್ಲಿ ಮಹಿಳಾ ವೈದ್ಯಾಧಿಕಾರಿಗಳನ್ನು ಮರು ವರ್ಗಾವಣೆ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ವಿಶ್ವಬ್ಯಾಂಕ್ ಯೋಜನೆ

54 (364) ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವಬ್ಯಾಂಕ್ ಯೋಜನೆಯಡಿ ರಾಜ್ಯದಲ್ಲಿ ಸಮುದಾಯ ಆರೋಗ್ಯ ಕೇಂದ್ರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲ ಸೌಕರ್ಯಕ್ಕೆ ಒದಗಿಸಲಾಗುತ್ತಿರುವ ಒಟ್ಟು ಅನುದಾನ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು)

ಆ) ಚಾಮರಾಜನಗರ ಜಿಲ್ಲೆಯಲ್ಲಿ ಈ ಯೋಜನೆಯಡಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ, ಇತರೆ ಮೂಲ ಸೌಕರ್ಯ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಗುಂಡ್ಲುಪೇಟೆ ತಾಲ್ಲೂಕಿನ ಬೇಗೂರು ಸಮುದಾಯ ಆರೋಗ್ಯ ಕೇಂದ್ರ ಹಾಗೂ 1. ಮಂಗಲ, 2. ಹಸಗೂಲಿ, 3. ಕೊಡಸೋಗೆ, 4. ಬೊಮ್ಮನಹಳ್ಳಿ ಆರೋಗ್ಯ ಕೇಂದ್ರಗಳ ಕಟ್ಟಡ ನಿರ್ಮಾಣಕ್ಕೆ ಅನುದಾನ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?